ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):-

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಹತ್ತು ವರ್ಷಗಳಿಂದ ಒಂದೇ ಶಾಲೆಯಲ್ಲಿ ಕೆಲಸ ಮಾಡುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರುಗಳ ಸಂಖ್ಯೆ 608 ಮತ್ತು ಪ್ರೌಢಶಾಲಾ (ಮಾಧ್ಯಮಿಕ) ಶಿಕ್ಷಕರುಗಳ ಸಂಖ್ಯೆ 55.

ಆ) ಸದರಿ ಶಿಕ್ಷಕರುಗಳು ವರ್ಗಾವಣೆ ನಿಯಮಗಳಿಗೆ ಒಳಪಟ್ಟಿರುತ್ತಾರೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಸೇವಾ ಸಹಕಾರಿ ಸಂಘಗಳ ಸಂಖ್ಯೆ

460 (1060). ಶ್ರೀಮತಿ ಮೋಟಮ್ಮ (ಮೂಡಿಗೆರೆ):- ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು ಎಷ್ಟು ಸೇವಾ ಸಹಕಾರ ಸಂಘಗಳಿಗೆ? (ತಾಲ್ಲೂಕುವಾರು ವಿವರವನ್ನು ಓದಗಿಸುವುದು)

ಆ) ಅವುಗಳಲ್ಲಿ ಮಹಿಳಾ ಸೊಸೈಟಿಗಳೆಷ್ಟು?

ಇ) ಅವುಗಳಲ್ಲಿ ಎಷ್ಟು ಲಾಭದಲ್ಲಿ ಮತ್ತು ನಷ್ಟದಲ್ಲಿ ನಡೆಯುತ್ತಿವೆ?

ಈ) ನಷ್ಟದಲ್ಲಿ ನಡೆಯುತ್ತಿರುವುದಕ್ಕೆ ಕಾರಣವೇನು?

ಉ) ನಷ್ಟದಲ್ಲಿರುವ ಮಹಿಳಾ ಸೊಸೈಟಿಗಳೆಷ್ಟು?

ಶ್ರೀ ಎಸ್.ಆರ್. ಮೋರೆ (ಸಹಕಾರ ಸಚಿವರು):-

ಅ) ಜಿಲ್ಲೆಯಲ್ಲಿ ಒಟ್ಟು 110 ವ್ಯವಸಾಯ ಸೇವಾ ಸಹಕಾರ ಸಂಘಗಳಿಗೆ ವಿವರಗಳು ಈ ರೀತಿ ಇದೆ.

1) ಚಿಕ್ಕಮಗಳೂರು	26
2) ಮಡಿಕೇರಿ	14
3) ಶೃಂಗೇರಿ	06
4) ಕೊಪ್ಪ	12
5) ನರಸಿಂಹರಾಜಪುರ	06
6) ತರೀಕೆರೆ	18
7) ಕಡೂರು	28

ಆ) ಅವುಗಳಲ್ಲಿ ಮಹಿಳಾ ಸೊಸೈಟಿಗಳು ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಸಕಲೇಶಪುರದಲ್ಲಿ ಜೆ.ಎಂ.ಸಿ ಕಟ್ಟಡ ನಿರ್ಮಾಣ

461 (708). ಶ್ರೀ ಬಿ.ಆರ್. ಗುರುದೇವ್ (ಅಲೂರು ಸಕಲೇಶಪುರ):- ಮಾನ್ಯ ಕಾನೂನು ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಸಕಲೇಶಪುರ ಪಟ್ಟಣದಲ್ಲಿ ಜೆ.ಎಂ.ಸಿ.ಗೆ ಸ್ವಂತ ಕಟ್ಟಡವಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?